ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ

ಸಿಸಿ ಃ1551/2014 ಪ್ರಾಸಾ –2

ಚಾಸಾ –7

ಸಾಕ್ಷಿದಾರರ ಹೆಸರುಃ ಹೆಚ್.ಆನಂದ ಕುಮಾರ್
ತಂದೆ ಹೆಸರುಃ ಹೊನ್ನಯ್ಯ
ವಯಸ್ಸುಃ 46
ವೃತ್ತಿಃ ಪಿ.ಎಸ್.ಐ
ವಾಸಸ್ಥಳಃ ಬೆಸಗರಹಳ್ಳಿ ಪೋಲಿಸ್ ಠಾಣೆ, ಮಂಡ್ಯಾ ಜಿಲ್ಲೆ.
ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 22-01-2020

ಮುಖ್ಯ ವಿಚಾರಣೆಃ ಎಪಿಪಿಯವರಿಂದ

ನಾನು ದಿಃ 05-04-2013 ರಿಂದ ದಿಃ 22-05-2014 ರವರೆಗೆ ಶನಿವಾರಸಂತೆ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 09-11-2013 ರಂದು ಈ ಪ್ರಕರಣದ ಕಡತವನ್ನು ಮುಖ್ಯ ಪೇದೆ-199 ಸುರೇಶ್ ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ 10-11-2013 ರಂದು ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆವರೆಗೆ ಚಾಸಾ 1, ಚಾಸಾ 4 ಮತ್ತು 5 ರವರ ಸಮಕ್ಷಮ ನಿಪಿ 2 ರಂತೆ ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿ ನಿಪಿ 2 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಫಿರ್ಯಾದಿದಾರರು ಪಂಚನಾಮೆ ಸಮಯದಲ್ಲಿ ಹಾಜರುಪಡಿಸಿದ ಚಿನ್ನದಂತಿರುವ ತಾಳಿ ಹಾಗೂ ಲಕ್ಷ್ಮೀ ಕಾಸಿನ ಕರಿ ಮಣಿ ಇರುವ 2 ಸರಗಳನ್ನು ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದನ್ನು ಠಾಣಾ ಮಾಲು ಪಟ್ಟಿಯಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅದೇ ದಿನ ಸುಂಟಿಕೊಪ್ಪ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಶ್ರೀಮತಿ. ಗೀತಾ ಎಂಬುವವರಿಗೆ ಮೋಸ ಮಾಡಿ ಪ್ರಕರಣ ದಾಖಲಾಗಿದ್ದು , ಈ ಸಂಬಂಧ ಸದರಿ ಪ್ರಕರಣದಲ್ಲಿ ದಸ್ತಗಿರಿ ಮಾಡಲಾಹಿಗಿದ್ದ ಆರೋಪಿ ಲಕ್ಷ್ಮಮ್ಮ ರವರನ್ನು ಈ ಪ್ರಕರಣದಲ್ಲಿ ಈ-ಮೇಲ್ ಮೂಲಕ ಸದರಿ ಆರೋಪಿ ಭಾವ ಚಿತ್ರವನ್ನು ತೋರಿಸಿದ ಮೇರೆಗೆ ತನಗೆ ಮೋಸ ಮಾಡಿರುವುದಾಗಿ ಈ ಪ್ರಕರಣದ ಫಿರ್ಯಾದಿಯಾದ ಭಾಗ್ಯಮ್ಮ ರವರು ತಿಳಿಸಿದ ಮೇರೆಗೆ , ಅದೇ ದಿನ ಮಾನ್ಯ ನ್ಯಾಯಾಲಯದಲ್ಲಿ ಪೋಲಿಸರ ವಶಕ್ಕೆ ನೀಡುವಂತೆ ಮನವಿಯನ್ನು ಸಲ್ಲಿಸಿಕೊಂಡಿರುತ್ತೇನೆ.

ದಿಃ 12-11-2013 ರಂದು ಸದರಿ ಪ್ರಕರಣದ ಆರೋಪಿಯನ್ನು ನಮ್ಮ ವಶಕ್ಕೆ ಪಡೆದು ಆಕೆಯ ಸ್ವ ಇಚ್ಚಾ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿ ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ಸುಂಟಿಕೊಪ್ಪದ ಸಂತೆಯಲ್ಲಿ ಯಾರೋ ಒಬ್ಬರಿಗೆ ಶನಿವಾರಸಂತೆಯಲ್ಲಿ ಈ ಪ್ರಕರಣದ ಫಿರ್ಯಾದಿಗೆ ಮೋಸ ಮಾಡಿ ಕಸಿದುಕೊಂಡ ಚಿನ್ನದ ಸರವನ್ನು ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ಆಕೆ ತೋರಿಸಲು ಸಾಧ್ಯ ಆಗದ ಕಾರಣ ಮೋಸ ಮಾಡಿ ಕಸಿದುಕೊಂಡ ಚಿನ್ನವನ್ನು ವಶಪಡಿಸಿಕೊಳ್ಳಲು ಆಗಿರುವುದಿಲ್ಲ .

ದಿಃ 13-11-2013 ರಂದು ಸದರಿ ಆರೋಪಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಪಿ.ಎಸ್.ಆರ್. ಕ್ರಮಗಳನ್ನು ಅನುಸರಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ದಿಃ 14-11-2013 ರಂದು ಈ ಪ್ರಕರಣದಲ್ಲಿ ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 18-11-2013 ರಂದು ಈ ಪ್ರಕರಣ ತನಿಖೆ ಪೂರ್ಣ ಗೊಂಡಿದ್ದರಿಂದ ಆರೋಪಿಯ ವಿರುದ್ದ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಆರೋಪಿಯನ್ನು ಸಾಕ್ಷಿ ನೋಡಿದರೆ ಗುರುತಿಸುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಮರು ವಿಚಾರಣೆ ಇಲ್ಲಾ .

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ